# ಜಿಲ್ಲಾ ಪಂಚಾಯತ್ ಹಾಸನ

## ಅಧಿಕೃತ ಜ್ಞಾಪನ

ವಿಷಯ:- ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ 2012-13ನೇ ಸಾಲಿನಲ್ಲಿ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಅನುದಾನ ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ:- (1) ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ-11/ಬಿಪಿಎ/2010/ದಿನಾಂಕ: 6-7-2010.

(2) ಸರ್ಕಾರದ ಆದೇಶ ಸಂಖ್ಯೆ:ಆಇ/05/ಜಿಪ/2012/ಬೆಂಗಳೂರು ದಿನಾಂಕ:7-5-2012.

(3) ಮಾನ್ಯ ಮುಕಾನಿಅ.ಜಿಪಂ.ಹಾಸನ ರವರ ಕಡತ ಕಂಡಿಕೆ ಸಂಖ್ಯೆ:23/ಆರ್ಥಿಕ/ಅವ್ಯ/ಅಧೀ-1/ಎಂಆರ್/2012-13/ದಿನಾಂಕ: 9-11-12ರ ಆದೇಶದಂತೆ.

-o-

**ಪ್ರಸ್ತಾವನೆ:-**

ಉಲ್ಲೇಖ(1)ರಲ್ಲಿನ ಆದೇಶದಲ್ಲಿ ಜಿಲ್ಲಾಪಂಚಾಯತ್ ನಿಧಿ/ತಾಲ್ಲೂಕು ಪಂಚಾಯತ್ ನಿಧಿ ಲೆಕ್ಕ ನಿರ್ವಹಣೆ ಬಗ್ಗೆ ವಿವರಿಸಿದೆ. ಅದರಂತೆ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ನಿಧಿಗಳನ್ನು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಆಯಾ ನಿಧಿ-I, II ಹಾಗೂ III ಎಂದು ಮೂರು ಭಾಗಗಳಾಗಿ ವಿಂಗಡಿಸಿದೆ. ಅದರಂತೆ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳು ಆಯಾ ನಿಧಿಗಳಲ್ಲಿ ಬರುವ ಯೋಜನೆಯಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಲೆಕ್ಕ ಇಡಬೇಕಾಗಿದೆ. ಅದರ ಪ್ರಕಾರವಾಗಿ 2012-13ನೇ ಸಾಲಿಗೆ ವೈದ್ಯಕೀಯ ವೆಚ್ಚದ ಮರುಪಾವತಿ ಅನುದಾನ ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ ಹೊರಡಿಸಲಾಗಿದೆ.

**ಜಿಪಂ.ಆದೇಶ ಸಂಖ್ಯೆ:ZPH/BUD/TPG/ವೈವೆ/2012-13** **ದಿನಾಂಕ:15-11-2012**

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಲಿಂಕ್ ಡಾಕ್ಯುಮೆಂಟ್ ಲೆಕ್ಕಶೀರ್ಷಿಕೆ 2515-00-197-1-10-300 (ಯೋಜನೇತರ) ಅಡಿ ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮದಡಿ ಅಧಿಕಾರಿ/ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ರೂ 11.50 ಲಕ್ಷ ಅನುದಾನವನ್ನು 8 ತಾಲ್ಲೂಕು ಪಂಚಾಯಿತಿಗಳಿಗೆ ಬಿಡುಗಡೆಗೊಳಿಸಿದೆ.

ಹೀಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಆಯಾಯ ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದ ಅನುದಾನವನ್ನು ಬಿಳಿ ಬಣ್ಣದ ಬಿಲ್ಲಿನಲ್ಲಿ ಸರ್ಕಾರದ ಲೆಕ್ಕಕ್ಕೆ ವೆಚ್ಚ ಭರಿಸಿ ಹಳದಿ ಬಣ್ಣದ ಚಲನ್ ಮೂಲಕ ಆಯಾಯ ತಾಲ್ಲೂಕು ಪಂಚಾಯಿತಿ ನಿಧಿ-IIಕ್ಕೆ ಜಮಾ ಮಾಡಿಕೊಳ್ಳಲು ಆದೇಶಿಸಿದೆ ಹಾಗೂ ಬಿಳಿ/ಹಳದಿ ಬಣ್ಣದ ಪೇಯೀಸ್ ರಸೀದಿ ಮತ್ತು ಹಳದಿ ಚಲನ್ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-II ಎಂದು ಮೊಹರು ಹಾಕುವುದು.

ಈ ರೀತಿ ತಾಲ್ಲೂಕು ಪಂಚಾಯಿತಿ ನಿಧಿ-IIಕ್ಕೆ ಜಮಾ ಮಾಡಿಕೊಂಡ ಅನುದಾನವನ್ನು ನಿಯಮಾನುಸಾರ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಿಗೆ ಒಂದೇ ಕಂತಿನಲ್ಲಿ ಪೂರ್ಣ ಹಣ ಬಿಡುಗಡೆ ಮಾಡಿ ಅದರ ಒಂದು ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ಸೂಚಿಸಿದೆ. ವೆಚ್ಚದ ಲೆಕ್ಕಶೀರ್ಷಿಕೆ:2515-00-102-0-63-021 ಯೋಜನೇತರ.

| ಕ್ರಮ ಸಂಖ್ಯೆ | ತಾಲ್ಲೂಕು ಪಂಚಾಯತ್ | ಒಟ್ಟು ಬಿಡುಗಡೆ | ಇಲಾಖೆವಾರು ಹಂಚಿಕೆ | | | | |
|---|---|---|---|---|---|---|---|
| | | | ತಾಪಂ. | ಸಮಾಜ ಕಲ್ಯಾಣ | ಶಿಕ್ಷಣ | ಸಿಡಿಪಿಓ | ಕೃಷಿ |
| 1 | ಆಲೂರು | 4.00 | 1.00 | - | 3.00 | - | - |
| 2 | ಅರಕಲಗೂಡು | 5.00 | 1.00 | - | 4.00 | - | - |
| 3 | ಅರಸೀಕೆರೆ | 11.00 | 1.00 | - | 10.00 | - | - |
| 4 | ಬೇಲೂರು | 6.00 | 1.00 | - | 5.00 | - | - |
| 5 | ಚನ್ನರಾಯಪಟ್ಟಣ | 6.00 | 1.00 | - | 5.00 | - | - |
| 6 | ಹಾಸನ | 8.00 | 1.00 | - | 7.00 | - | - |
| 7 | ಹೊಳೆನರಸೀಪುರ | 5.00 | 0.00 | - | 5.00 | - | - |
| 8 | ಸಕಲೇಶಪುರ | 5.00 | 0.00 | - | 5.00 | - | - |
| | ಒಟ್ಟು | **50.00** | **6.00** | **0** | **44.00** | **0** | **0** |

(ಒಟ್ಟು ಐವತ್ತು ಲಕ್ಷ ರೂಪಾಯಿಗಳು ಮಾತ್ರ)

-2)

ಅನುಷ್ಠಾನಾಧಿಕಾರಿಗಳು (ಬಟವಾಡೆ ಅಧಿಕಾರಿಗಳು) ವೆಚ್ಚ ಭರಿಸುವಾಗ ಹಳದಿ ಬಿಲ್ಲಿನ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-II ಎಂದು ಮೊಹರು ಹಾಕಲು ಅನುದಾನ ಮರು ಬಿಡುಗಡೆ (ಅನುಷ್ಠಾನಾಧಿಕಾರಿಗಳಿಗೆ) ಮಾಡುವ ಆದೇಶದಲ್ಲಿ ಪ್ರತ್ಯೇಕವಾಗಿ ಸೂಚಿಸಲಾಗುವುದು ಎಂದು ಆದೇಶಿಸಿದೆ.

(ಸಹಿ)
ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

**ಪ್ರತಿಯನ್ನು:-**

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಜಿಲ್ಲಾಪಂಚಾಯತ್,ಹಾಸನ ರವರ ಮಾಹಿತಿಗೆ ಸಲ್ಲಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
3. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,ವಿಧಾನಸೌಧ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
4. ಉಪಕಾರ್ಯದರ್ಶಿಗಳು (ಆಡಳಿತ) ಮತ್ತು (ಅಭಿವೃದ್ಧಿ), ಹಾಸನ ರವರ ಮಾಹಿತಿಗೆ.
5. ಜಿಲ್ಲಾ ಖಜಾನಾಧಿಕಾರಿಗಳು, ಖಜಾನೆ ಇಲಾಖೆ, ಹಾಸನ ರವರ ಮಾಹಿತಿಗೆ.
6. ಉಪ ಖಜಾನಾಧಿಕಾರಿಗಳು ____________ ತಾಲ್ಲೂಕು ರವರ ಮಾಹಿತಿಗೆ.
7. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್______________ ತಾಲ್ಲೂಕು ಇವರ ಅಗತ್ಯ ಕ್ರಮಕ್ಕಾಗಿ.
8. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ರವರ ಮಾಹಿತಿಗಾಗಿ.
9. ಕಛೇರಿ ಪ್ರತಿ.

ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

ZP+TP MEDICAL GRANTS